# AstraZeneca ನೀತಿ ಸಂಹಿತೆ: ಮೌಲ್ಯಗಳು,
## ನಡವಳಿಕೆಗಳು ಮತ್ತು ನೀತಿಗಳು

ನಮ್ಮ ನೀತಿ ಸಂಹಿತೆಯು ಕೆಲಸದಲ್ಲಿ ನಮ್ಮ ಮೌಲ್ಯಗಳನ್ನು ವ್ಯಾಖ್ಯಾನಿಸುತ್ತದೆ ಮತ್ತು ಜೀವನವನ್ನು ಬದಲಾಯಿಸುವ ಔಷಧಗಳನ್ನು ಒದಗಿಸಲು ನಮ್ಮ ನಡವಳಿಕೆಗಳಿಗೆ ಮಾರ್ಗದರ್ಶನ ಒದಗಿಸುತ್ತದೆ

### ನಾವು ವಿಜ್ಞಾನವನ್ನು ಅನುಸರಿಸುತ್ತೇವೆ

- ನಾನು ಕುತೂಹಲದಿಂದ ವಿಜ್ಞಾನದ ಎಲ್ಲೆಗಳನ್ನು ವಿಸ್ತರಿಸುತ್ತೇನೆ
- ಪಾಲುದಾರರು ಹಾಗೂ ಸಹಯೋಗಿಗಳೊಂದಿಗೆ ನಾನು ಸೃಜನಾತ್ಮಕವಾಗಿ ಕೆಲಸ ಮಾಡುತ್ತೇನೆ

### ನಾವು ರೋಗಿಗೆ ಮೊದಲ ಆದ್ಯತೆ ನೀಡುತ್ತೇವೆ

- ರೋಗಿಗಳ ಸೇವೆ ಮಾಡುವ ಕುರಿತು ನನಗೆ ಹೆಮ್ಮೆಯಿದೆ ಮತ್ತು ನಾನು ಕೈಗೊಳ್ಳುವ ಪ್ರತಿ ನಿರ್ಧಾರದಲ್ಲೂ ಅವರ ಕುರಿತು ಕಾಳಜಿವಹಿಸುತ್ತೇನೆ
- ರೋಗಿಗಳ ಅವಶ್ಯಕತೆಗಳೇನು ಎಂದು ಅರ್ಥಮಾಡಿಕೊಳ್ಳಲು ನಾನು ಶ್ರಮಿಸುತ್ತೇನೆ ಮತ್ತು ಅದಕ್ಕೆ ತಕ್ಕಂತೆ ನಡೆದುಕೊಳ್ಳುತ್ತೇನೆ

### ನಾವು ಗೆಲ್ಲಲು ಆಡುತ್ತೇವೆ

- ಗೆಲುವಿಗಾಗಿ ಸರಿಯಾದ ಆಯ್ಕೆಗಳನ್ನು ಮಾಡುವುದಕ್ಕೆ ನಾನು ಬದ್ಧನಾಗಿದ್ದೇನೆ
- ಉದ್ಯಮದಾದ್ಯಂತ ಸಹಯೋಗದಲ್ಲಿ ಕೆಲಸ ಮಾಡುವ, ಅಧಿಕ ಕಾರ್ಯಕ್ಷಮತೆಯುಳ್ಳ ತಂಡಗಳನ್ನು ನಾನು ನಿರ್ಮಿಸುತ್ತೇನೆ

### ನಾವು ಸರಿಯಾದದ್ದನ್ನೇ ಮಾಡುತ್ತೇವೆ

- ನನ್ನ ಕೆಲಸಗಳು ಮತ್ತು AZ ನ ಯಶಸ್ಸಿಗೆ ನಾನೇ ಜವಾಬ್ದಾರನಾಗಿದ್ದೇನೆ
- ನಾವು ಮಾಡುವ ಎಲ್ಲಾ ಕೆಲಸಗಳು ನಮ್ಮ ಮೌಲ್ಯಗಳೊಂದಿಗೆ ಹೊಂದಾಣಿಕೆಯಾಗುತ್ತವೆ ಎನ್ನುವುದನ್ನು ಖಚಿತಪಡಿಸಲು ನಾನು ಧ್ವನಿ ಎತ್ತುತ್ತೇನೆ

### ನಾವು ಉದ್ಯಮಶೀಲರು

- ನಾನು ಧೈರ್ಯಶಾಲಿಯಾಗಿದ್ದೇನೆ, ದೃಢವಾಗಿದ್ದೇನೆ ಮತ್ತು ಚತುರತೆಯಿಂದ ರಿಸ್ಕ್ ತೆಗೆದುಕೊಳ್ಳುತ್ತೇನೆ
- ನಾನು ತ್ವರಿತಗತಿಯಲ್ಲಿ ಕೆಲಸ ಮಾಡುತ್ತೇನೆ ಮತ್ತು ಕೆಲಸ ಪೂರೈಸುವ ರೀತಿಯನ್ನು ಸರಳಗೊಳಿಸುತ್ತೇನೆ

### ಜಾಗತಿಕ ನೀತಿಗಳು

- ನಮ್ಮ ವಿಜ್ಞಾನ
- ನಮ್ಮ ಮಾತುಕತೆಗಳು
- ನಮ್ಮ ಕೆಲಸದ ಸ್ಥಳ
- ನಮ್ಮ ಸುಸ್ಥಿರತೆ

## ಇದೇಕೆ ಮುಖ್ಯವಾಗಿದೆ

ನಾವು ಮಾಡುವ ಎಲ್ಲದರಲ್ಲಿಯೂ ವಿಜ್ಞಾನವು ಮುಖ್ಯವಾಗಿದೆ; ಇದು ನಮ್ಮ ವ್ಯವಹಾರ ಮತ್ತು ಮೌಲ್ಯಗಳ ಮುಖ್ಯಾಂಶವಾಗಿದೆ. ನಾವು ಪರಿವರ್ತನೆ ತರುವ ಮತ್ತು ಆರೋಗ್ಯವನ್ನು ಸುಸ್ಥಿರಗೊಳಿಸುವ ಹೊಸತನದ  ಸಂಶೋಧನೆಗಳನ್ನು ಮಾಡಲು ವಿಜ್ಞಾನದ ಎಲ್ಲೆಗಳನ್ನು ವಿಸ್ತರಿಸುತ್ತೇವೆ.

ವಿಜ್ಞಾನದಲ್ಲಿ ಮುಂದಾಳತ್ವ ವಹಿಸುವ ಮೂಲಕ, ನಾವು ಜಗತ್ತಿನ ಎಲ್ಲೆಡೆಯಲ್ಲಿ ರೋಗಿಗಳ ಜೀವನವನ್ನು ಸುಧಾರಿಸುತ್ತೇವೆ.

## ನಾವು ಇದನ್ನು ಹೇಗೆ ಮಾಡುತ್ತೇವೆ

ನಾವು ಕಾರ್ಯನಿರ್ವಹಿಸುವ ಎಲ್ಲಾ ಕಡೆಯಲ್ಲಿಯೂ ನೈತಿಕತೆ ಮತ್ತು ಸಮಗ್ರತೆಯ ಅತ್ಯಧಿಕ ಮಾನದಂಡಗಳಿಗೆ ಒಳಪಟ್ಟು ಹೊಸತನದ ಸಂಶೋಧನೆ, ಅಭಿವೃದ್ಧಿ ಮತ್ತು ಉತ್ಪಾದನೆಯನ್ನು ಕೈಗೊಳ್ಳುತ್ತೇವೆ. ನಾವು ಕೇವಲ ಕಾನೂನುಬದ್ಧವೊಂದೇ ಅಲ್ಲದೇ ನೈತಿಕವಾಗಿಯೂ ಸಮರ್ಥನೀಯವಾದ ಕೆಲಸವನ್ನು ನೀಡಲು ಸುರಕ್ಷತೆ, ಗುಣಮಟ್ಟ, ಸಂಶೋಧನೆ ಮತ್ತು ಜೈವಿಕ ನೈತಿಕತೆಗಳಿಗೆ ಸಂಬಂಧಿಸಿದ ಕಾನೂನುಗಳು, ನಿಯಮಾವಳಿಗಳು, ಕೋಡ್ಗಳು, ಮಾರ್ಗಸೂಚಿಗಳು ಮತ್ತು ಒಳ್ಳೆಯ ರೂಢಿಯ ಮಾನದಂಡಗಳನ್ನು ಅನುಸರಿಸುತ್ತೇವೆ.

- ರೋಗಿಯ ಸುರಕ್ಷೆ ನಮ್ಮ ಬದ್ಧತೆಯಾಗಿದೆ ಮತ್ತು ಸುರಕ್ಷತೆ, ಪರಿಣಾಮಕಾರಿತ್ವ ಮತ್ತು ನಮ್ಮ ಉತ್ಪನ್ನಗಳ ಗುಣಮಟ್ಟವನ್ನು ಅವರ ಜೀವನದುದ್ದಕ್ಕೂ ಖಾತ್ರಿಪಡಿಸಲು ನಾವು ನಿಯಂತ್ರಣಗಳನ್ನು ಕಾಯ್ದುಕೊಳ್ಳುತ್ತೇವೆ.
- ನಿಖರವಾದ ಸುರಕ್ಷತೆಯ ಪ್ರೊಫೈಲ್ ಖಾತ್ರಿಪಡಿಸಲು ವ್ಯತಿರಿಕ್ತ ಘಟನೆಗಳನ್ನು ಒಳಗೊಂಡಂತೆ ಜನರ ಮೇಲೆ, ಉತ್ಪನ್ನಗಳು ಮತ್ತು ಪ್ರಕ್ರಿಯೆಗಳ ಮೇಲೆ ಪರಿಣಾಮ ಉಂಟುಮಾಡುವ ಸಮಸ್ಯೆಗಳನ್ನು ನಾವು ಗುರುತಿಸುತ್ತೇವೆ, ವರದಿ ಮಾಡುತ್ತೇವೆ ಮತ್ತು ಪರಿಹರಿಸುತ್ತೇವೆ.
- ನಾವು ಸೂಕ್ತವಾದ ಮಾಹಿತಿಯುಕ್ತ ಸಮ್ಮತಿಯ ಪ್ರಕ್ರಿಯೆಗಳನ್ನು ಅನುಸರಿಸುತ್ತೇವೆ ಮತ್ತು ವೈಯಕ್ತಿಕ ಡೇಟಾವನ್ನು ರಕ್ಷಿಸುತ್ತೇವೆ.
- ಅಪಾಯಗಳನ್ನು ಕನಿಷ್ಠಗೊಳಿಸುತ್ತಲೇ ನಮ್ಮ ಉದ್ದೇಶಿತ ರೋಗಿಗಳ ಜನಸಂಖ್ಯೆಗಾಗಿ ಸಂಭಾವ್ಯ ಪ್ರಯೋಜನಗಳನ್ನು ಹೆಚ್ಚಿಸಲು ವೈದ್ಯಕೀಯ ಕಾರ್ಯಕ್ರಮಗಳನ್ನು ನಾವು ವಿನ್ಯಾಸಪಡಿಸುತ್ತೇವೆ.
- ನಾವು ಹೆಲ್ಸಿಂಕಿ ಘೋಷಣೆ ಮತ್ತು ಜೀವ ವೈವಿಧ್ಯ ರಕ್ಷಣೆಯ ಕುರಿತಾದ ಸಮ್ಮೇಳನದ ತತ್ವಗಳನ್ನು ಬೆಂಬಲಿಸುತ್ತೇವೆ ಮತ್ತು ನಾಗೊಯಾ ಪ್ರೊಟೊಕಾಲ್ ಅನ್ನು ಪಾಲಿಸುತ್ತೇವೆ.
- ರೋಗಗಳನ್ನು ಇನ್ನಷ್ಟು ಅರ್ಥಮಾಡಿಕೊಳ್ಳಲು, ರೋಗಪತ್ತೆ ಸುಧಾರಿಸಲು ಮತ್ತು ಹೊಸ ಚಿಕಿತ್ಸೆಗಳನ್ನು ಅಭಿವೃದ್ಧಿಪಡಿಸಲು ಮಾನವ ಎಂಬ್ರಿಯಾನಿಕ್ ಕಾಂಡಕೋಶಗಳು ಮತ್ತು ಇತರ ಭ್ರೂಣ ಅಂಗಾಂಶಗಳನ್ನು  ಒಳಗೊಂಡಂತೆ, ಅಥವಾ ಅವುಗಳನ್ನು ಹೊರತುಪಡಿಸಿ ಮಾನವ ಜೈವಿಕ ಮಾದರಿಗಳನ್ನು ಬಳಸಿಕೊಂಡು ನಾವು ಸಂಶೋಧನೆಗಳನ್ನು ನಡೆಸುತ್ತೇವೆ.
- ಮಾನವ ಹಾಗೂ ಪ್ರಾಣಿ ಜೀವಕೋಶಗಳು, ಪ್ರಾಣಿಗಳು ಹಾಗೂ ಇತರ ಜೀವಿಗಳನ್ನು ಒಳಗೊಂಡು ಜೆನೆಟಿಕ್ ರೀತಿಯಲ್ಲಿ ಬದಲಾಯಿಸಲಾದ ವಸ್ತುಗಳ ಸುರಕ್ಷಿತ ಬಳಕೆ ಹಾಗೂ ನಿಯಂತ್ರಣದ ಕುರಿತು ಹೆಚ್ಚಿನ ಎಚ್ಚರವಹಿಸುತ್ತೇವೆ.
- ನಾವು ಸಂಶೋಧನೆಯಲ್ಲಿ ಪ್ರಾಣಿಗಳ ಬಳಕೆಯನ್ನು ಎಚ್ಚರಿಕೆಯಿಂದ ಪರಿಗಣಿಸುತ್ತೇವೆ ಮತ್ತು ಒಂದೇ ಜಾಗತಿಕ ಮಾನದಂಡವನ್ನು ಅನ್ವಯಿಸುತ್ತೇವೆ. ನಾವು ೩ಆರ್‌ಗಳ ಸೂತ್ರ ವನ್ನು (ಬದಲಾವಣೆ-ತಗ್ಗಿಸುವಿಕೆ-ಸುಧಾರಣೆ)ಅನ್ವಯಿಸುತ್ತೇವೆ ಮತ್ತು ಪಾರದರ್ಶಕವಾಗಿ ಕೆಲಸ ಮಾಡುತ್ತೇವೆ. ನಾವು ದೊಡ್ಡ ಜಾತಿಯ ಕೋತಿಗಳನ್ನು ಅಥವಾ ಕಾಡುಗಳಿಂದ ಹಿಡಿದಿರುವ ಕೋತಿಗಳನ್ನು ಬಳಸುವುದಿಲ್ಲ.

ನಾವು ನಮ್ಮ ವೈದ್ಯಕೀಯ ಹಾಗೂ ಅವಲೋಕನದ ಅಧ್ಯಯನಗಳನ್ನು, ಅಧ್ಯಯನ ನಂತರದ ಫಲಿತಾಂಶಗಳನ್ನು ಬಹಿರಂಗಪಡಿಸುವಿಕೆಯ ವೆಬ್ಸೈಟುಗಳಲ್ಲಿ ನೋಂದಾಯಿಸತ್ತೇವೆ ಹಾಗೂ ಸಹಯೋಗಿಗಳು ಪರಿಶೀಲಿಸುವ ಪತ್ರಿಕೆಗಳಲ್ಲಿ ನಮ್ಮ ಫಲಿತಾಂಶಗಳನ್ನು ಪ್ರಕಟಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ, ಇವೆಲ್ಲವನ್ನೂ ಪಾರದರ್ಶಕತೆಯನ್ನು ಪ್ರದರ್ಶಿಸುವುದಕ್ಕಾಗಿ ಸಮಯೋಚಿತವಾಗಿ ಮಾಡುತ್ತೇವೆ.

- ನಾವು ನಮ್ಮ ಅಧ್ಯಯನ ಫಲಿತಾಂಶಗಳನ್ನು ಅವು ನಮಗೆ ಅನುಕೂಲಕರ ಅಲ್ಲದೇ ಇದ್ದರೂ ಪ್ರಕಟಿಸುತ್ತೇವೆ.
- ನಮ್ಮ ಅಧ್ಯಯನದ ಉದ್ದೇಶ, ಅರ್ಥಪೂರ್ಣ ವೈಜ್ಞಾನಿಕ ಮಾಹಿತಿಯನ್ನು ನಮ್ಮ ಬೌದ್ಧಿಕ ಸ್ವತ್ತಿನೊಂದಿಗೆ ಯಾವುದೇ ರಾಜಿ ಮಾಡಿಕೊಳ್ಳದೇ ಹಂಚಿಕೊಳ್ಳಲು ನಾವು ಒಳ್ಳೆಯ ಪ್ರಕಟಣೆಗಳ ರೂಢಿಯ ಮಾರ್ಗಸೂಚಿಗಳನ್ನು ಮತ್ತು ಐಸಿಎಂಜೆಇ ಶಿಫಾರಸುಗಳನ್ನು ಅನುಸರಿಸುತ್ತೇವೆ.

ನಾವು ವಿಜ್ಞಾನದ ಏಳಿಗೆಗಾಗಿ ಬಾಹ್ಯ ಪ್ರಾಯೋಜಿತ ವೈಜ್ಞಾನಿಕ ಸಂಶೋಧನೆಯನ್ನು ಬೆಂಬಲಿಸುತ್ತೇವೆ ಮತ್ತು ರೋಗಿಗಳಿಗಾಗಿ ಉತ್ತಮ ಔಷಧಗಳ ಅಭಿವೃದ್ಧಿಗೆ ಕೊಡುಗೆ ಸಲ್ಲಿಸುತ್ತೇವೆಯೇ ಹೊರತು ನಮ್ಮ ಉತ್ಪನ್ನಗಳ ಪ್ರಚಾರಕ್ಕಾಗಿ ಅಲ್ಲ.

ಮೂರನೆಯವರು ನಮ್ಮ ಪರವಾಗಿ ನಡೆಸುವವುಗಳಲ್ಲಿ ಗುಣಮಟ್ಟ ಮತ್ತು ವೈಜ್ಞಾನಿಕ ನಡವಳಿಕೆಗಾಗಿ ನಮ್ಮನ್ನು ಹೊಣೆಯಾಗಿಸಿಕೊಳ್ಳುತ್ತೇವೆ.

## ASTRAZENECA ಜಾಗತಿಕ ನೀತಿ: ನಮ್ಮ ಮಾತುಕತೆಗಳು

### ಇದೇಕೆ ಮುಖ್ಯವಾಗಿದೆ

ಔಷಧಗಳ ಮುಂದಿನ ತಲೆಮಾರನ್ನು ಒದಗಿಸುವುದು, ವಿಜ್ಞಾನವು ನಮ್ಮನ್ನು ಎತ್ತ ಒಯ್ಯುತ್ತದೆಯೋ ಅದನ್ನು ಅವಲಂಬಿಸಿರುತ್ತದೆ. ವಿಭಿನ್ನತೆಯನ್ನು ಉಂಟುಮಾಡುವ ವೈಜ್ಞಾನಿಕ ಸುಧಾರಣೆಗಳು ಅಭಿವೃದ್ಧಿಯ ಪ್ರತಿ ಹಂತದಲ್ಲಿಯೂ ಮತ್ತು ಕಂಪನಿಯ ಪ್ರತಿಯೊಂದು ಮಟ್ಟದಲ್ಲಿಯೂ ಸಮಗ್ರತೆಯ ಮೇಲೆ ರೂಪುಗೊಂಡಿರುತ್ತವೆ.

ಸಮಗ್ರತೆಯನ್ನು ಕಾಯ್ದುಕೊಳ್ಳುವುದು ಮತ್ತು ಎಲ್ಲ ಮಾತುಕತೆಗಳಲ್ಲಿಯೂ ನಮ್ಮ ಮೌಲ್ಯಗಳನ್ನು ಉಳಿಸಿಕೊಳ್ಳುವುದು ನಮ್ಮ ವಿಜ್ಞಾನವನ್ನುರಕ್ಷಿಸುತ್ತದೆ, ನಮ್ಮ ಮನ್ನಣೆಯನ್ನು ಎತ್ತಿಹಿಡಿಯುತ್ತದೆ ಮತ್ತು ಸಾರ್ವಜನಿಕರಲ್ಲಿ ನಂಬಿಕೆಯನ್ನು ರೂಪಿಸುತ್ತದೆ.

### ನಾವು ಇದನ್ನು ಹೇಗೆ ಮಾಡುತ್ತೇವೆ

ನಾವು ಕಾರ್ಯನಿರ್ವಹಿಸುವ ಎಲ್ಲೆಡೆಗಳಲ್ಲಿಯೂ ನಮ್ಮ ವ್ಯವಹಾರದ ಪ್ರತಿಯೊಂದು ಭಾಗವನ್ನೂ ಸಮಗ್ರತೆ, ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯ ಮೂಲಕ ನಿರ್ವಹಿಸುತ್ತೇವೆ.

- ನಾವು ವ್ಯವಹಾರವನ್ನು ಕಳೆದುಕೊಳ್ಳುವಂತಿದ್ದರೂ ಕೂಡ ಲಂಚಗುಳಿತನ ಅಥವಾ ಬೇರೆ ಯಾವುದೇ ರೀತಿಯ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ. ನಾವು ಹಣದ ವಿನಿಮಯ, ಅನುಕೂಲ ಅಥವಾ ಬೇರೆ ಯಾವುದೇ ಮೌಲ್ಯಯುತ ವಸ್ತುಗಳ ಮೂಲಕ ಸೂಕ್ತವಲ್ಲದ ರೀತಿಯಲ್ಲಿ ಬೇರೆಯವರ ನಿರ್ಧಾರವನ್ನು ಪ್ರಭಾವಿಸುವುದಿಲ್ಲ ಅಥವಾ ಸೂಕ್ತವಲ್ಲದ ರೀತಿಯಲ್ಲಿ ನಾವು ಪ್ರಭಾವಕ್ಕೆ ಒಳಗಾಗಲು ಅವಕಾಶ ನೀಡುವುದಿಲ್ಲ. ಸೂಕ್ತವಲ್ಲದ ಪ್ರಭಾವದಂತೆ ಕಂಡುಬರುವ ಯಾವುದೇ ಚಟುವಟಿಕೆಯನ್ನು ಕೂಡ ನಾವು ಮಾಡುವುದಿಲ್ಲ.
- ನಮ್ಮ ವೈಯಕ್ತಿಕ ಹಿತಾಸಕ್ತಿ ಮತ್ತು ಸಂಬಂಧಗಳು ಹಿತಾಸಕ್ತಿ ಸಂಘರ್ಷ ಅಥವಾ ನಮ್ಮ ವೃತ್ತಿಪರ ನಿರ್ಣಯದ ಮೇಲೆ ಪ್ರಭಾವಬೀರುವಂತೆ ಕಾಣುವ ಹಾಗೆಯೂ ಇರದಂತೆ ಖಾತ್ರಿವಹಿಸುತ್ತೇವೆ.
- ನಾವು ವೈಯಕ್ತಿಕ ಡೇಟಾವನ್ನು ನ್ಯಾಯಯುತವಾಗಿ, ಪಾರದರ್ಶಕವಾಗಿ ಮತ್ತು ಸುರಕ್ಷಿತವಾಗಿ ಸಂಗ್ರಹಿಸುವುದು, ಬಳಸುವುದು, ಉಳಿಸಿಕೊಳ್ಳುವುದು, ಹಂಚಿಕೊಳ್ಳುವುದು ಮತ್ತು/ಅಥವಾ ಬಹಿರಂಗಪಡಿಸುವ ಮೂಲಕ ಖಾಸಗಿತನವನ್ನು ಗೌರವಿಸುತ್ತೇವೆ ಮತ್ತು ರಕ್ಷಿಸುತ್ತೇವೆ.
- ನಮ್ಮ ವ್ಯವಹಾರದ ಯಾವುದೇ ಸ್ಥಳದಲ್ಲಿ ಆಧುನಿಕ ಗುಲಾಮಿತನ ಅಥವಾ ಮಾನವ ಕಳ್ಳಸಾಗಾಣಿಕೆಗೆ ಅವಕಾಶ ನೀಡುವುದಿಲ್ಲ.
- ನಾವು ಇನ್ಸೈಡರ್ ಟ್ರೇಡಿಂಗ್ ಗೆ ಅವಕಾಶ ನೀಡುವುದಿಲ್ಲ.
- ನಾವು ನ್ಯಾಯಯುತವಾಗಿ ಮತ್ತು ಕಾನೂನುಬದ್ಧವಾಗಿ ಸ್ಪರ್ಧಿಸುತ್ತೇವೆ.
- ನಾವು ವ್ಯಾಪಾರ ನಿಯಂತ್ರಣದ ಅಗತ್ಯತೆಗಳನ್ನು ಅನುಸರಿಸುತ್ತೇವೆ.
- ನಾವು ಸಾರ್ವಜನಿಕ ನೀತಿ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಹೊಣೆಗಾರಿಕೆಯಿಂದ ಭಾಗವಹಿಸುತ್ತೇವೆ.
- ನಮ್ಮ ಮಾತುಕತೆಗಳು ಮತ್ತು ಹಣಪಾವತಿಗಳ ಕುರಿತು ಸಮಯೋಚಿತ ಪಾರದರ್ಶಕತೆಯನ್ನು ಆಯ್ಕೆಮಾಡುತ್ತೇವೆ.
- ನಾವು ತೆರಿಗೆ ತಪ್ಪಿಸುವುದಕ್ಕೆ ಅವಕಾಶ ನೀಡುವುದಿಲ್ಲ ಅಥವಾ ಅಲಕ್ಷಿಸುವುದಿಲ್ಲ.
- ನಾವು ನಮ್ಮ ಬಗ್ಗೆ ತಪ್ಪಾದ ನಿರೂಪಣೆಯನ್ನು ನೀಡುವುದಿಲ್ಲ.
- ನಾವು ನಮ್ಮ ಪರವಾಗಿ ಇತರರಿಗೆ ನಿಷೇಧಿತ ನಡವಳಿಕೆಯಲ್ಲಿ ತೊಡಗಿಸಿಕೊಳ್ಳಲು ಅವಕಾಶ ನೀಡುವುದಿಲ್ಲ, ಕೇಳುವುದಿಲ್ಲ ಅಥವಾ ಸಾಧ್ಯಗೊಳಿಸುವುದಿಲ್ಲ ಮತ್ತು ಈ ಮೂಲಕ ಪ್ರತಿಯೊಂದು ಸನ್ನಿವೇಶದಲ್ಲಿಯೂ ಸಮಗ್ರತೆಯ ಮಾನದಂಡಗಳನ್ನು ಎತ್ತಿಹಿಡಿಯುತ್ತೇವೆ.

ನಾವು ನಮ್ಮ ವ್ಯವಹಾರದ ಕುರಿತು ಸತ್ಯಯುತವಾಗಿ ಹಾಗೂ ಹೊಣೆಗಾರಿಕೆಯಿಂದ ಸಂವಹನ ಮಾಡುತ್ತೇವೆ.

- ನಮ್ಮ ಪ್ರಚಾರದ ಮತ್ತು ಪ್ರಚಾರದ್ದಲ್ಲದ ಸಂವಹನಗಳು ಮತ್ತು ಚಟುವಟಿಕೆಗಳು ನಿಖರವಾಗಿರುತ್ತವೆ, ತಪ್ಪು ಕಲ್ಪನೆ ನೀಡುವಂತಿರುವುದಿಲ್ಲ, ನ್ಯಾಯಯುತ, ಸಮತೋಲಿತವಾಗಿರುತ್ತವೆ ಮತ್ತು ವೈಜ್ಞಾನಿಕ ಪುರಾವೆಯ ಬೆಂಬಲ ಹೊಂದಿರುತ್ತವೆ.
- ನಾವು ಕೇವಲ ಅನುಮೋದಿತ ಉತ್ಪನ್ನಗಳನ್ನು ಮತ್ತು ಅವುಗಳ ಅನುಮೋದಿತ ಬಳಕೆಗಾಗಿ ಮಾತ್ರ ಪ್ರಚಾರ ಮಾಡುತ್ತೇವೆ.
- ನಾವು ನಮ್ಮ ಉತ್ಪನ್ನಗಳ ಅಪಾಯಗಳು ಮತ್ತು ಪ್ರಯೋಜನ ಎರಡರ ಕುರಿತೂ ಆರೋಗ್ಯ ಕಾಳಜಿ ವೃತ್ತಿಪರರಿಗೆ ಮಾಹಿತಿ ನೀಡುತ್ತೇವೆ, ಇದರಿಂದ ಅವರು ಪ್ರತಿ ರೋಗಿಗೆ ಅತ್ಯುತ್ತಮ ಚಿಕಿತ್ಸೆಯ ನಿರ್ಧಾರವನ್ನು ಕೈಗೊಳ್ಳಬಹುದು.
- ನಾವು ರೋಗಿಗಳ ಅಗತ್ಯಗಳನ್ನು ತಿಳಿಯಲು ಅವರೊಂದಿಗೆ ತೊಡಗಿಸಿಕೊಳ್ಳುತ್ತೇವೆ, ಇದರಿಂದ ನಾವು ಅವುಗಳನ್ನು ಪರಿಹರಿಸಬಹುದು.
- ನಾವು ಸಾಮಾಜಿಕ ಮಾಧ್ಯಮ ಮತ್ತು ಇತರ ಆನ್ಲೈನ್ ಸಮುದಾಯಗಳಲ್ಲಿ ಹೊಣೆಗಾರಿಕೆಯಿಂದ ಭಾಗವಹಿಸುತ್ತೇವೆ.

ನಾವು ನಮ್ಮ ನೈತಿಕತೆ ಹಾಗೂ ಸಮಗ್ರತೆಗೆ ಸಮಾನವಾಗಿರುವ ಬದ್ಧತೆಯನ್ನು ಹೊಂದಿರುವ ಅರ್ಹ ಮೂರನೇ ಪಕ್ಷಗಳೊಂದಿಗೆ ಅವರು ನಮಗೆ ನೈಜವಾಗಿ ಅಗತ್ಯವಿರುವಾಗ ಮಾತ್ರವೇ ಕೆಲಸ ಮಾಡುತ್ತೇವೆ. ಅವರು ಮಾಡುವ ಕೆಲಸಕ್ಕೆ ನ್ಯಾಯಯುತ ಹಾಗೂ ಸೂಕ್ತವಾಗಿರುವಷ್ಟು ಹಣವನ್ನು ಪಾವತಿಸುತ್ತೇವೆ.

## ASTRAZENECA ಜಾಗತಿಕ ನೀತಿ: ನಮ್ಮ ಕೆಲಸದ ಸ್ಥಳ

### ಇದೇಕೆ ಮುಖ್ಯವಾಗಿದೆ

ಜನರಿಗೆ ಗೌರವ ದೊರಕುವ, ಬೆಂಬಲವಿರುವ ಮತ್ತು ಸುರಕ್ಷಿತವಾದ ಅದ್ಭುತ ಕೆಲಸದ ಸ್ಥಳವನ್ನು ಒದಗಿಸುವ ಗುರಿಯನ್ನು ನಾವು ಹೊಂದಿದ್ದೇವೆ, ಇದರಿಂದ ನಮ್ಮ ವೈವಿಧ್ಯಮಯ, ವಿಶಿಷ್ಟ ಪ್ರತಿಭಾನ್ವಿತ ಉದ್ಯೋಗಿಗಳು ಹೊಸತನಕ್ಕೆ ಚಾಲನೆ ನೀಡಲು ಮುಕ್ತವಾಗಿರುತ್ತಾರೆ. ನಾವು ವಿಜ್ಞಾನದ ಎಲ್ಲೆಗಳನ್ನು ವಿಸ್ತರಿಸುವ ಉತ್ಸಾಹವನ್ನು ಹೊಂದಿರುವ ಸಮರ್ಥ ತಂಡಗಳಿಗೆ ಮನ್ನಣೆ ನೀಡುತ್ತೇವೆ.

ಕೆಲಸದ ಸ್ಥಳವನ್ನು ಸುರಕ್ಷಿತ ವ್ಯಾವಹಾರಿಕ ಪರಿಸರವಾಗಿ ಕಾಯ್ದುಕೊಳ್ಳುವುದರಿಂದ ನಮ್ಮ ಜನರು, ಆಸ್ತಿಗಳು ಮತ್ತು ಮನ್ನಣೆಯನ್ನು ರಕ್ಷಿಸಲು ಸಹಾಯವಾಗುತ್ತದೆ ಮತ್ತು ನಷ್ಟ ಹಾಗೂ ಅಡೆತಡೆಗಳನ್ನು ಕಡಿಮೆ ಮಾಡುತ್ತದೆ.

### ನಾವು ಇದನ್ನು ಹೇಗೆ ಮಾಡುತ್ತೇವೆ

ನಾವು ವೈವಿಧ್ಯತೆ, ಗೌರವ ಮತ್ತು ಸಮಾನ ಅವಕಾಶದ ಸಂಸ್ಕೃತಿಯನ್ನು ಉತ್ತೇಜಿಸುತ್ತೇವೆ, ಇಲ್ಲಿ ವೈಯಕ್ತಿಕ ಯಶಸ್ಸು ಕೇವಲ ವೈಯಕ್ತಿಕ ಸಾಮರ್ಥ್ಯವನ್ನು ಹಾಗೂ ಕಂಪನಿಗೆ ನೀಡುವ ಕೊಡುಗೆಯನ್ನು ಅವಲಂಬಿಸಿರುತ್ತದೆ.

- ಲಿಂಗ, ಜನಾಂಗ, ರಾಷ್ಟ್ರೀಯತೆ, ವಯಸ್ಸು, ಲೈಂಗಿಕ ಪ್ರವೃತ್ತಿ ಅಥವಾ ಇತರ ವೈವಿಧ್ಯತೆಯ ಸ್ವರೂಪಗಳ ಗಣನೆಯಿಲ್ಲದೇ ನಾವು ಇತರರನ್ನು ನ್ಯಾಯಯುತವಾಗಿ, ಸಮಗ್ರತೆ, ಪ್ರಾಮಾಣಿಕತೆ, ಸೌಜನ್ಯತೆ, ಪರಿಗಣನೆ, ಗೌರವ ಮತ್ತು ಘನತೆಯಿಂದ ನಡೆಸಿಕೊಳ್ಳುತ್ತೇವೆ.
- ಎಲ್ಲರೂ ತಮ್ಮ ಶಕ್ತಿ ಮೀರಿ ನಿರ್ವಹಣೆ ತೋರಿಸಬಹುದಾದ ಒಳಗೊಳ್ಳುವಿಕೆಯ ವಾತಾವರಣವನ್ನು ನಾವು ಉತ್ತೇಜಿಸುತ್ತೇವೆ.
- ನಾವು ನೇಮಕಾತಿ, ನಿಯೋಜನೆ, ಸಂಬಳ, ಬೆಳವಣಿಗೆ ಮತ್ತು ಭಡ್ತಿಯ ಕುರಿತಾದ ನಿರ್ಧಾರಗಳನ್ನು ಸಾಮರ್ಥ್ಯ, ಅನುಭವ, ಇತರರ ಕುರಿತು ನಡವಳಿಕೆ, ಕೆಲಸದಲ್ಲಿ ಕಾರ್ಯನಿರ್ವಹಣೆ ಮತ್ತು ಕೆಲಸಕ್ಕೆ ಸಂಬಂಧಿಸಿ ಪ್ರದರ್ಶಿಸಿರುವ ಸಾಮರ್ಥ್ಯವನ್ನು ಅವಲಂಬಿಸಿ ಕೈಗೊಳ್ಳುತ್ತೇವೆ.
- ನಾವು ಉದ್ಯೋಗಿಯ ಪ್ರತಿಭೆಯನ್ನು ಬೆಳೆಸುತ್ತೇವೆ ಮತ್ತು ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯವನ್ನು ಸಾಧಿಸುವುದಕ್ಕೆ ಸಹಾಯ ಮಾಡುತ್ತೇವೆ.

ನಮ್ಮ ತ್ವರಿತ ಗತಿಯ ವ್ಯವಹಾರವನ್ನು ನಮ್ಮ ಮೌಲ್ಯಗಳಿಗೆ ಸರಿಹೊಂದುವಂತೆ ಉಳಿಸಿಕೊಳ್ಳಲು ಮತ್ತು ನಮ್ಮ ತಪ್ಪುಗಳನ್ನು ಪರಿಹರಿಸುವುದು ಮತ್ತು ಅವುಗಳಿಂದ ಕಲಿಯುವುದನ್ನು ಖಾತ್ರಿಪಡಿಸಿಕೊಳ್ಳಲು ಮುಕ್ತ ಹಾಗೂ ಧೈರ್ಯಯುತ ಸಂಭಾಷಣೆಯನ್ನು ಅವಲಂಬಿಸಿರುತ್ತೇವೆ.

- ನಮ್ಮ ಕಂಪನಿಯು ರೋಗಿಗಳಿಗೆ ಸೇವೆ ಸಲ್ಲಿಸುವುದನ್ನು ಮುಂದುವರಿಸುವಂತೆ ನಮ್ಮ ಮೌಲ್ಯಗಳು ಅಥವಾ ನೀತಿಗಳಿಗೆ ಸರಿಹೊಂದುವುದಿಲ್ಲವೆಂದು ಸಂದೇಹಿಸಿರುವ ಯಾವುದೇ ನಡವಳಿಕೆಯನ್ನು ಗುರುತಿಸಲು ಮತ್ತು ವರದಿ ಮಾಡಲು ಹೊಣೆಗಾರಿಕೆಯನ್ನು ಒಪ್ಪಿಕೊಂಡಿರುತ್ತೇವೆ. ನಾವು ಮಾಡಬೇಕು ಎಂದು ಭಾವಿಸಿದಲ್ಲಿ ನಾವು ಅನಾಮಧೇಯವಾಗಿ ವರದಿ ಮಾಡಬಹುದು.
- ನಾವು ಆತಂಕಗಳನ್ನು ನಂಬಿಕೆಯಿಂದ ವರದಿ ಮಾಡುತ್ತೇವೆ ಮತ್ತು ಸೇಡಿನ ಕ್ರಮವನ್ನು ನಾವು ಸಹಿಸುವುದಿಲ್ಲ.

ನಾವು ಸುರಕ್ಷಿತ, ಆರೋಗ್ಯಕರ, ಸುಭದ್ರ ಕೆಲಸದ ವಾತಾವರಣವನ್ನು ಉತ್ತೇಜಿಸುತ್ತೇವೆ ಮತ್ತು ಉಳಿಸಿಕೊಳ್ಳುತ್ತೇವೆ.

- ನಾವು ಅಪಾಯ ಗುರುತಿಸಲು ಮತ್ತು ನಿರ್ವಹಿಸಲು ಹಾಗೂ ಬಲವಾದ SHE ನಿರ್ವಹಣೆಯನ್ನು ಉಳಿಸಿಕೊಳ್ಳಲು ಪರಿಣಾಮಕಾರಿ ಸುರಕ್ಷತೆ, ಆರೋಗ್ಯ ಮತ್ತು ಪರಿಸರ (SHE) ನಿರ್ವಹಣಾ ವ್ಯವಸ್ಥೆಗಳನ್ನು ಬಳಸುತ್ತೇವೆ.
- ನಮ್ಮ SHE ಮಾನದಂಡಗಳಿಗೆ ಸರಿಹೊಂದುವಂತಿರುವ ಮಾನಡಂಡವನ್ನು ಒಪ್ಪಿಕೊಳ್ಳುವ ಇತರರೊಂದಿಗೆ ಮಾತ್ರ ನಾವು ಕೆಲಸ ಮಾಡುತ್ತೇವೆ.

ನಮ್ಮ ವಿಜ್ಞಾನದ ಹೆಚ್ಚಿನ ಬೆಳವಣಿಗೆಗೆ ನಾವು ಕಂಪನಿಯ ಸ್ವತ್ತುಗಳ ಅತ್ಯುತ್ತಮ ಬಳಕೆಯನ್ನು ಮಾಡುತ್ತೇವೆ ಮತ್ತು ತಂತ್ರಜ್ಞಾನ ಹಾಗೂ ವ್ಯವಸ್ಥೆಗಳನ್ನು ಒಳಗೊಂಡು ನಮ್ಮ ಆಸ್ತಿಯ ಸಮಗ್ರತೆಯನ್ನು ರಕ್ಷಿಸುತ್ತೇವೆ.

- ನಾವು ಸ್ವತ್ತುಗಳನ್ನು ದಕ್ಷತೆಯಿಂದ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸುತ್ತೇವೆ ಇದರಿಂದ ಕಂಪನಿ ಅವುಗಳ ಪೂರ್ತಿ ಮೌಲ್ಯದ ಪ್ರಯೋಜನ ಪಡೆಯುತ್ತದೆ.
- ಜನರು, ಕಂಪನಿ ಹಾಗೂ ಷೇರುದಾರರ ಮೌಲ್ಯವನ್ನು ಕಾಯಲು ನಾವು ಕಂಪನಿಯ ಸ್ವತ್ತುಗಳು, ಉದ್ಯೋಗಿಗಳು ಅಥವಾ ರೋಗಿಗಳ ನಿರ್ವಹಣೆ ಮಾಡುತ್ತೇವೆ ಮತ್ತು ಇವುಗಳಿಗೆ ಆಗುವ ಆಪಾಯಗಳನ್ನು ವರದಿ ಮಾಡುತ್ತೇವೆ.

## ಇದೇಕೆ ಮುಖ್ಯವಾಗಿದೆ

ನಾವು ಆರೋಗ್ಯವನ್ನು ಉತ್ತೇಜಿಸುವ ರೀತಿಯಲ್ಲಿ ಚಿಕಿತ್ಸೆಗಳನ್ನು ರೂಪಿಸುವ ಮತ್ತು ನೀಡುವ ವ್ಯವಹಾರದಲ್ಲಿದ್ದೇವೆ ಮತ್ತು ಇದು ಕಂಪನಿಯ ಮತ್ತು ಒಟ್ಟಾಗಿ ಸಮಾಜ ಹಾಗೂ ನಮ್ಮ ಜಗತ್ತಿನ ಭವಿಷ್ಯವನ್ನು ಸುಭದ್ರಗೊಳಿಸುತ್ತದೆ.

ದೀರ್ಘಕಾಲಿಕ ಮೌಲ್ಯವನ್ನು ಒದಗಿಸುವ ನಮ್ಮ ಧ್ಯೇಯೋದ್ದೇಶಗಳು ಪ್ರತಿ ದಿನ ನಾವು ಮಾಡುವ ನಿರ್ಧಾರಗಳನ್ನು ಅವಲಂಬಿಸಿದ್ದು, ಇದು ಸಾರ್ವಜನಿಕರ ನಂಬಿಕೆಗೆ ಪಾತ್ರವಾಗಿರುವ ಕಂಪನಿಯಾಗಿ ನಮ್ಮ ದೀರ್ಘಕಾಲಿಕ ಅಸ್ತಿತ್ವವನ್ನು ಬೆಂಬಲಿಸುತ್ತದೆ.

## ನಾವು ಇದನ್ನು ಹೇಗೆ ಮಾಡುತ್ತೇವೆ

ನಾವು ಕಾರ್ಯನಿರ್ವಹಿಸುವ ಎಲ್ಲ ಸ್ಥಳಗಳಲ್ಲಿ ನಮ್ಮ ವ್ಯವಹಾರದ ಪ್ರತಿಯೊಂದು ಭಾಗದಲ್ಲಿ ನಮಗೆ ಅನ್ವಯಿಸುವ ಕಾನೂನುಗಳು, ನಿಯಮಾವಳಿಗಳು, ಕೋಡ್ಗಳು, ಮಾರ್ಗಸೂಚಿಗಳು ಮತ್ತು ಮಾನದಂಡಗಳನ್ನು ಅನುಸರಿಸುತ್ತೇವೆ.

- ಕಾನೂನು ಪಾಲಿಸುವುದು ಮತ್ತು ನೈತಿಕವಾಗಿ ಕೆಲಸ ಮಾಡುವುದು ನಮಗೆಲ್ಲರಿಗೂ ಹಾಗೂ ನಮ್ಮ ಪರವಾಗಿ ಕೆಲಸ ಮಾಡುವ ಎಲ್ಲರಿಗೂ ಮೂಲಭೂತ, ಹೊಂದಾಣಿಕೆ ಮಾಡಲಾಗದ ಹೊಣೆಗಾರಿಕೆಯಾಗಿದೆ ಎಂಬುದನ್ನು ನಾವು ನಮ್ಮ ಮೌಲ್ಯಗಳು, ನೀತಿಗಳು ಮತ್ತು ತರಬೇತಿಯಲ್ಲಿ ಸ್ಪಷ್ಟಪಡಿಸುತ್ತೇವೆ.

ನಾವು ದೃಢವಾದ ಹಣಕಾಸು, ನಿಯಂತ್ರಣಾಧಿಕಾರ ಮತ್ತು ಕಾರ್ಯನಿರ್ವಹಣಾ ನಿಯಂತ್ರಣಗಳನ್ನು ಉಳಿಸಿಕೊಳ್ಳುತ್ತೇವೆ.

- ನಾವು ಮೋಸವನ್ನು ಸಹಿಸುವುದಿಲ್ಲ ಮತ್ತು ಇದಕ್ಕೆ ತುತ್ತಾಗುವುದರಿಂದ ದೂರವುಳಿಯಲು ಎಲ್ಲ ಸಕಾರಣ ಕ್ರಮಗಳನ್ನು ಕೈಗೊಳ್ಳುತ್ತೇವೆ.
- ನಾವು ನಮ್ಮ ವ್ಯಾವಹಾರಿಕ ನಿರ್ಧಾರಗಳು ಹಾಗೂ ಬೆಂಬಲಿಸುವ ತಾರ್ಕಿಕ ವಿವರಣೆಗಳನ್ನು ಸತ್ಯಯುತವಾಗಿ ಮತ್ತು ಪೂರ್ತಿಯಾಗಿ ದಾಖಲಿಸಿಕೊಳ್ಳುತ್ತೇವೆ.
- ನಾವು ರಿಸ್ಕ್ ಅನ್ನು ಗುರುತಿಸಲು ಮತ್ತು ನಿರ್ವಹಿಸಲು ನಿಯಂತ್ರಣ ವ್ಯವಸ್ಥೆಗಳನ್ನು ಬಳಸುತ್ತೇವೆ ಮತ್ತು ಬಲಿಷ್ಠ ಕಾರ್ಯನಿರ್ವಹಣೆಯನ್ನು ಉಳಿಸಿಕೊಳ್ಳುತ್ತೇವೆ.
- ಮಹತ್ವದ ಘಟನೆಯಲ್ಲಿ ನಿರ್ಣಾಯಕ ಪ್ರಕ್ರಿಯೆಗಳನ್ನು ಉಳಿಸಿಕೊಳ್ಳಲು ನಾವು ಯೋಜನೆಗಳನ್ನು ಹೊಂದಿದ್ದೇವೆ.
- ನಾವು ನಿಖರ ಕಂಪನಿ ಪುಸ್ತಕಗಳು ಮತ್ತು ದಾಖಲೆಗಳನ್ನು ಉಳಿಸಿಕೊಳ್ಳುತ್ತೇವೆ.

ನಾವು ಪಾರಿಸರಿಕವಾಗಿ ಹೊಣೆಗಾರಿಕೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತೇವೆ.

- ನಾವು ನೈಸರ್ಗಿಕ ಸಂಪನ್ಮೂಲಗಳ ಮೇಲೆ ನಮ್ಮ ಅವಲಂಬನೆ ಹಾಗೂ ಪ್ರಭಾವವನ್ನು ಕಡಿಮೆ ಮಾಡಲು ಮತ್ತು ಪಾರಿಸರಿಕ ಸುಸ್ಥಿರತೆಯನ್ನು ಉತ್ತೇಜಿಸಲು ಕೆಲಸ ಮಾಡುತ್ತೇವೆ.
- ಸಂಶೋಧನೆಯಿಂದ ತೊಡಗಿ ವಿಲೇವಾರಿಯ ತನಕ  ನಮ್ಮ ಉತ್ಪನ್ನಗಳಿಂದ ಪರಿಸರದ ಮೇಲೆ ಆಗುವ ಪರಿಣಾಮವನ್ನು ತಗ್ಗಿಸಲು ನಾವು ಕೆಲಸ ಮಾಡುತ್ತೇವೆ.

ನಾವು ಆರೋಗ್ಯ ಮತ್ತು ಜೀವನ ಗುಣಮಟ್ಟ ಸುಧಾರಿಸಲು ಕೆಲಸ ಮಾಡುತ್ತೇವೆ ಮತ್ತು ವಿಜ್ಞಾನದ ಮೌಲ್ಯವನ್ನು ಹೆಚ್ಚಿಸುತ್ತೇವೆ.

- ನಾವು ಆರೋಗ್ಯ ಕಾಳಜಿಗೆ ಇರುವ ಆಕ್ಸೆಸ್ ಅನ್ನು ಸುಧಾರಿಸಲು ಮತ್ತು ವೈವಿಧ್ಯಮಯ ರೋಗಿ ಹಾಗೂ ಕೌಟುಂಬಿಕ ಅಗತ್ಯಗಳನ್ನು ಪೂರೈಸಲು ಸಂಶೋಧನೆ ಮಾಡುತ್ತೇವೆ ಹಾಗೂ ದೀರ್ಘಕಾಲ ಉಳಿಯುವ ಆರೋಗ್ಯ ಪ್ರಯೋಜನಗಳನ್ನು ಒದಗಿಸುತ್ತೇವೆ.
- ನಾವು ಆರೋಗ್ಯ ಅಥವಾ ಆರೋಗ್ಯಕಾಳಜಿ ವ್ಯವಸ್ಥೆಗಳು, ವೈದ್ಯಕೀಯ ಅಥವಾ ವೈಜ್ಞಾನಿಕ ಶಿಕ್ಷಣ, ವೈದ್ಯಕೀಯ ಮತ್ತು ವೈಜ್ಞಾನಿಕ ಸಂಶೋಧನೆಯಲ್ಲಿ ಬೆಳವಣಿಗೆ ಮತ್ತು ಪ್ರಕೃತಿ ವಿಕೋಪ ಪರಿಹಾರ ಕಾರ್ಯಗಳನ್ನು ಬೆಂಬಲಿಸುವ ವೈಜ್ಞಾನಿಕ, ಶೈಕ್ಷಣಿಕ ಅಥವಾ ಉದಾರ ಉದ್ದೇಶಗಳಿಗಾಗಿ ಉದಾರ ದೇಣಿಗೆ ಮತ್ತು ಇತರ ಕೊಡುಗೆಗಳನ್ನು ನೀಡುತ್ತೇವೆ.
- ನಾವು ಔಷಧಗಳ  ಕಾನೂನುಬಾಹಿರ ವ್ಯಾಪಾರ ತಡೆಯಲು ಜಗತ್ತಿನ ಎಲ್ಲೆಡೆಯ ಪಾಲುದಾರರೊಂದಿಗೆ ಕೆಲಸ ಮಾಡುವ ಮೂಲಕ ಅಂತಹ ಔಷಧಗಳಿಂದ ಆಗುವ ಅಪಾಯದಿಂದ ರೋಗಿಗಳನ್ನು ರಕ್ಷಿಸುವ ಗುರಿ ಹೊಂದಿದ್ದೇವೆ.

## ನೀತಿ ಸಂಹಿತೆಯು ಏಕೆ ಮುಖ್ಯವಾಗಿದೆ?

ನಾವು ಪ್ರತಿ ದಿನವೂ, ನಮ್ಮ ಪ್ರತಿಯೊಂದು ಕೆಲಸದಲ್ಲಿ, ನಾವು ಕೆಲಸ ಮಾಡುವ ಪ್ರತಿಯೊಂದು ದೇಶದಲ್ಲಿಯೂ AstraZenecaವನ್ನು ಪ್ರತಿನಿಧಿಸುವುದರಿಂದ ನಾವು ಸತತವಾಗಿ ಅನ್ವಯಿಸುತ್ತೇವೆ ಎಂದು ನಿರೀಕ್ಷಿಸಲಾಗುವ ಮೌಲ್ಯಗಳನ್ನು ಮತ್ತು ತತ್ವಗಳನ್ನು ತಿಳಿಸುವುದಕ್ಕೆ ನೀತಿ ಸಂಹಿತೆಯನ್ನು ಹೊಂದಿದ್ದೇವೆ.

ನಮ್ಮ ನೀತಿ ಸಂಹಿತೆ ಹಾಗೂ ಬೆಂಬಲಕಾರಿ ಜಾಗತಿಕ ಅಗತ್ಯತೆಗಳು ಜಗತ್ತಿನ ಉದ್ದಕ್ಕೂ ನಮಗೆ ಅನ್ವಯಿಸುವ ಕಾನೂನುಗಳು, ನಿಯಮಾವಳಿಗಳು, ಉದ್ಯಮ ಸಂಹಿತೆಗಳು, ಮಾರ್ಗಸೂಚಿಗಳು ಮತ್ತು ಮಾನದಂಡಗಳಿಗೆ ಬದ್ಧವಾಗಿಯೇ ಕೆಲಸ ಮಾಡುವುದಕ್ಕೆ ನಮಗೆ ಸಾಧನಗಳನ್ನು ಒದಗಿಸುತ್ತವೆ. ನಿಯಮಗಳು ಕಡಿಮೆ ಕಠಿಣವಾಗಿರುವ ಮಾರುಕಟ್ಟೆಗಳಲ್ಲಿಯೂ ನಾವು ನಮ್ಮದೇ ನೀತಿ ಸಂಹಿತೆ ಹಾಗೂ ಅಗತ್ಯತೆಗಳನ್ನು ಅನುಸರಿಸುತ್ತೇವೆ. ನಮ್ಮ ಜಾಗತಿಕ ಅಗತ್ಯತೆಗಳು ನಮ್ಮ ನೈತಿಕತಾ ನಡವಳಿಕೆಗಳ ಮಾನದಂಡಗಳಿಗೆ ಬೇಸ್ಲೈನ್ ಆಗಿರುವುದರಿಂದ, ಸ್ಥಳೀಯ ಮತ್ತು ವ್ಯಾವಹಾರಿಕ ಘಟಕದ ಅಗತ್ಯತೆಗಳು ಇನ್ನೂ ಹೆಚ್ಚು ಕಠಿಣವಾಗಿರುವಾಗ ಮಾತ್ರವೇ ಇವುಗಳಿಂದ ವಿಭಿನ್ನವಾಗಿರಬಹುದು.

ನೀತಿ ಸಂಹಿತೆ ಮತ್ತು ಬೆಂಬಲಕಾರಿ ಅಗತ್ಯತೆಗಳನ್ನು ಅನುಸರಿಸುವ ಮೂಲಕ (ಒಟ್ಟಾಗಿ " ನೀತಿ ಸಂಹಿತೆ"), ನಾವು ರೋಗಿಗಳು ಮತ್ತು ಪಾಲುದಾರರಿಗೆ ದೀರ್ಘಕಾಲಿಕ ಪ್ರಯೋಜನಗಳನ್ನು ಒದಗಿಸುತ್ತೇವೆ. ನಾವು ಹೊಣೆಗಾರಿಕೆಯಿಂದ ಯಶಸ್ಸನ್ನು ಸಾಧಿಸುತ್ತೇವೆ. ನಾವು ವಿಶ್ವಾಸವನ್ನು ಗಳಿಸುತ್ತೇವೆ ಮತ್ತು ಉಳಿಸಿಕೊಳ್ಳುತ್ತೇವೆ. ನಾವು ಕೆಲಸ ಮಾಡುವ ಸ್ಥಳದ ಬಗ್ಗೆ ಹೆಮ್ಮೆ ಹೊಂದಿರುತ್ತೇವೆ.

### ನೀತಿ ಸಂಹಿತೆಯನ್ನು ಯಾರು ಪಾಲಿಸಬೇಕು?

ನಾವೆಲ್ಲರೂ. ನೀತಿ ಸಂಹಿತೆಯ ಪಾಲನೆಗೆ ನಾವೆಲ್ಲರೂ ಹೊಣೆಗಾರರು. ಮ್ಯಾನೇಜರುಗಳು ಸಹ ತಮ್ಮ ತಂಡಗಳಿಗೆ ಇದನ್ನು ಅರ್ಥಮಾಡಿಸಲು ಮತ್ತು ಇದಕ್ಕೆ ಬದ್ಧವಾಗಿರುವಂತೆ ಸಹಾಯ ಮಾಡಲು ಹೊಣೆಗಾರರು. ಹಾಗೂ ನಾವು ಕೇವಲ ನಮ್ಮ ನೈತಿಕ ಮಾನದಂಡಗಳಿಗೆ ಸಮಾನವಾಗಿರುವ ಮಾನದಂಡಗಳನ್ನು ಹೊಂದಿರುವ ಮೂರನೆಯ ಪಕ್ಷಗಳೊಂದಿಗೆ ಮಾತ್ರವೇ ಕೆಲಸ ಮಾಡಲು ಆಯ್ದುಕೊಳ್ಳುತ್ತೇವೆ, ಇದರಿಂದ ನಮ್ಮ ಹೆಸರಿನಲ್ಲಿ ನಿರ್ವಹಿಸುವ ಯಾವುದೇ ಕೆಲಸದಲ್ಲಿಯೂ AstraZeneca ದ ಅತ್ಯಧಿಕ ಮಾನದಂಡಗಳನ್ನು ಕಾಯ್ದುಕೊಳ್ಳಬಹುದು.

### ನೀತಿ ಸಂಹಿತೆಯನ್ನು ಬಳಸಿ ನಾವು ನಿರ್ಧಾರವನ್ನು ಹೇಗೆ ಕೈಗೊಳ್ಳುತ್ತೇವೆ?

ನಮ್ಮ ನೀತಿಸಂಹಿತೆ ಪ್ರತಿ ಸನ್ನಿವೇಶವನ್ನೂ ಒಳಗೊಳ್ಳಲು ಸಾಧ್ಯವಿಲ್ಲ ಅಥವಾ ಒಳ್ಳೆಯ ನಿರ್ಣಯಕ್ಕೆ ಪರ್ಯಾಯವಾಗಿರುವುದಿಲ್ಲ. ಇದು ಸ್ವತಃ ನಾವೇ ನಿರ್ಧಾರ ಕೈಗೊಳ್ಳುವ ರೀತಿಯಲ್ಲಿ ನಮಗೆ ಮಾಹಿತಿ ನೀಡುತ್ತದೆ. ನಿಮಗೆ ಯಾವುದೇ ನಿರ್ಧಾರ ಕೈಗೊಳ್ಳುವುದಕ್ಕೆ ಕಷ್ಟವಾದಲ್ಲಿ, ನಿಮ್ಮನ್ನು ಸ್ವತಃ ಕೇಳಿಕೊಳ್ಳಿ

- ನಾನೇಕೆ ಈ ನಿರ್ಧಾರವನ್ನು ಮಾಡುತ್ತಿದ್ದೇನೆ?
- ಇದು AZ'ನ ಮೌಲ್ಯಗಳಿಗೆ ಮತ್ತು ತತ್ವಗಳಿಗೆ ಸರಿಹೊಂದುವಂತಿದೆಯೇ?
- ನನ್ನ ಮ್ಯಾನೇಜರ್ ಮತ್ತು ನಾನು ಇದರ ಕುರಿತು ನಾಳಿನ ಸುದ್ದಿಯಲ್ಲಿ ಓದುವುದನ್ನು ಇಷ್ಟಪಡುತ್ತೇವೆಯೇ?

ನೀವು ನಮ್ಮ ನೀತಿ ಸಂಹಿತೆಯ ಕುರಿತು ಪ್ರಶ್ನೆಯೊಂದನ್ನು ಹೊಂದಿದ್ದಲ್ಲಿ, ಕೇಳಿರಿ. ನಿಮ್ಮ ಮ್ಯಾನೇಜರ್ ಮತ್ತು ನಿಮ್ಮ ಸ್ಥಳೀಯ ಬದ್ಧತೆ, ಕಾನೂನು ಮತ್ತು ಮಾನವ ಸಂಪನ್ಮೂಲ ಪಾಲುದಾರರು ನಿಮಗೆ ಸಹಾಯ ಮಾಡುವುದಕ್ಕಾಗಿ ಇಲ್ಲಿರುತ್ತಾರೆ.

### ಯಾವುದಾದರೂ ತಪ್ಪಾದಲ್ಲಿ ಏನಾಗುತ್ತದೆ?

ಜನರು - ಮತ್ತು ಕಂಪನಿಗಳು - ಕಲಿಯುವುದು ತಪ್ಪುಗಳಿಂದಲೇ. ನೀವು ಯಾವುದೇ ತಪ್ಪನ್ನು ಕಂಡಲ್ಲಿ ಅಥವಾ ಸಂದೇಹಿಸಿದಲ್ಲಿ, ನಿಮ್ಮ ಆತಂಕಗಳನ್ನು ವರದಿ ಮಾಡಿ. ನಾವೆಲ್ಲರೂ ಮಾತನಾಡುವ ಹಕ್ಕು ಮತ್ತು ಕರ್ತವ್ಯ ಎರಡನ್ನೂ ಹೊಂದಿದ್ದೇವೆ, ಇದರಿಂದ ಕಂಪನಿ ಅದನ್ನು ಸರಿಪಡಿಸಬಹುದು ಮತ್ತು ಕಲಿತುಕೊಳ್ಳಬಹುದು. ನಂಬಿಕಾರ್ಹವಾಗಿರುವ ವರದಿ ಮಾಡಿರುವ ಯಾವುದೇ ವ್ಯಕ್ತಿಯ ವಿರುದ್ಧ ಸೇಡಿನ ಕ್ರಮಗಳನ್ನು AZ ಸಹಿಸಿಕೊಳ್ಳುವುದಿಲ್ಲ. ನೀತಿ ಸಂಹಿತೆಗೆ ಸಂಬಂಧಿಸಿ ಬದ್ಧತೆಯಿಲ್ಲದೇ ಇರುವ ವರದಿಗಳನ್ನು ಕಂಪನಿಯು ಸಂಪೂರ್ಣವಾಗಿ ತನಿಖೆ ಮಾಡುತ್ತದೆ ಮತ್ತು ಸೂಕ್ತ ಶಿಸ್ತುಕ್ರಮವನ್ನು ತೆಗೆದುಕೊಳ್ಳುತ್ತದೆ, ಇದು ಕೆಲವು ಸನ್ನಿವೇಶಗಳನ್ನು ಅವಲಂಬಿಸಿ ಮುಕ್ತಾಯಗೊಳಿಸುವಿಕೆಯನ್ನು ಒಳಗೊಂಡಿರಬಹುದು.

ವರದಿಯೊಂದನ್ನು ಮಾಡಲು, ಮೊದಲು ನಿಮ್ಮ ಮ್ಯಾನೇಜರ್ ಜೊತೆ ಮಾತನಾಡಿ. ಅವರ ಜೊತೆ ಮಾತನಾಡುವುದು ಹಿತಕರ ಎನಿಸದೇ ಇದ್ದಲ್ಲಿ, ಮಾನವ ಸಂಪನ್ಮೂಲ, ಕಾನೂನು ಅಥವಾ ಬದ್ಧತಾ ಪಾಲುದಾರರನ್ನು ಸಂಪರ್ಕಿಸಿ. ಒಂದು ವೇಳೆ ನೀವು ನಿಮ್ಮ ವ್ಯವಹಾರ ಘಟಕದ ಅಥವಾ ಮಾರ್ಕೆಟಿಂಗ್ ಕಂಪನಿಯ ಹೊರಗಿನ ಯಾರಾದರೂ ಒಬ್ಬರನ್ನು ಸಂಪರ್ಕಿಸಲು ಬಯಸಿದಲ್ಲಿ, ಕೆಳಗೆ ಪಟ್ಟಿ ಮಾಡಿರುವ ಯಾವುದೇ ಸಂಪನ್ಮೂಲಗಳನ್ನು ಬಳಸಿ. ಗೌಪ್ಯತೆಯನ್ನು ರಕ್ಷಿಸಲು ಎಲ್ಲ ಪ್ರಯತ್ನಗಳನ್ನೂ ಮಾಡಲಾಗುವುದು. ನಿಮ್ಮ ಸ್ಥಳೀಯ ಕಾನೂನುಗಳು ಅನುಮತಿಸಿದಲ್ಲಿ ನೀವು ಅನಾಮಧೇಯವಾಗಿಯೂ ವರದಿ ಮಾಡಬಹುದು.

**AZಎಥಿಕ್ಸ್** AZethics.com ಅಥವಾ ದೂರವಾಣಿ (ಕೆಳಗಿನ ಸಂಖ್ಯೆಗಳನ್ನು ನೋಡಿ)

| | | | |
|---|---|---|---|
| ಯುಕೆಯಿಂದ: | 0800 0328483 | ಚೀನಾದಿಂದ (ದಕ್ಷಿಣ): | 10-800-120-1239 |
| ಯುಎಸ್ನಿಂದ: | 866 993 8442 | ಚೀನಾದಿಂದ (ಉತ್ತರ): | 10-800-712-1239 |

ಇತರ ದೇಶಗಳಿಗಾಗಿ, ಸ್ಥಳೀಯ ಸಂಖ್ಯೆಗಳಿಗೆ AZethics.com ಅನ್ನು ಪರೀಕ್ಷಿಸಿ. ನಿಮ್ಮಿಂದ ವೆಬ್ ಆಕ್ಸೆಸ್ ಮಾಡಲು ಸಾಧ್ಯವಾಗದೇ ಇದ್ದರೆ ಅಥವಾ ನಿಮ್ಮ ದೇಶವನ್ನು ಪಟ್ಟಿ ಮಾಡದೇ ಇದ್ದರೆ + 1 503 748 0641.ಕ್ಕೆ ಕರೆ ಮಾಡಿ. ನೀವು AstraZeneca ದಿಂದ ಎಂಬುದನ್ನು ಕಾಲ್ ಸೆಂಟರ್ಗೆ ಹೇಳಿ ಮತ್ತು ನಿಮ್ಮ ಆದ್ಯತೆಯ ಭಾಷೆಯನ್ನು ತಿಳಿಸಿ.

AZಎಥಿಕ್ಸ್ ಅನ್ನು ಸ್ವತಂತ್ರ ಮೂರನೇ ಪಕ್ಷವು AstraZeneca ಪರವಾಗಿ ನಿರ್ವಹಿಸುತ್ತಿದೆ.

**ಇಮೇಲ್** GlobalCompliance@astrazeneca.com

**ವಿಳಾಸ** ಗ್ಲೋಬಲ್ ಕಂಪ್ಲೈಯನ್ಸ್, ಆಸ್ಟ್ರಾಝೆನೆಕಾ ಪಿಎಲ್ಸಿ, 1 ಫ್ರಾನ್ಸಿಸ್ ಕ್ರಿಕ್ ಅವೆನ್ಯೂ, ಕೇಂಬ್ರಿಡ್ಜ್ ಬಯೋಮೆಡಿಕಲ್ ಕ್ಯಾಂಪಸ್, ಕೇಂಬ್ರಿಡ್ಜ್ ಸಿಬಿ2 0ಎಎ ಯುನೈಟೆಡ್ ಕಿಂಗ್ಡಂ